– ಜೆಂಡರೆಂಬ ಜೆಂಡರಿನ ಇಬ್ಬಗೆಯಿರಲಿ, ಜೀವವೆನ್ನುವ ಸ್ವಂತಜೀವವೇ ಇಲ್ಲದ ವೈರಸ್ಸೊಂದು ತನ್ನಷ್ಟೇ ಲಿಂಗಾತೀತವಾದ ಮುಸುಡಿಗವಚವನ್ನು ಕವಿಚಿರಿಸಿರುವ ನಡುವೆ, ಎದುರುಕಂಡವರಲ್ಲಿ ಗಂಡಾರು ಹೆಣ್ಣಾರೆಂದು ವಿಂಗಡಿಸುವುದೇ ಕಷ್ಟವಾಯಿತು. ಇವರುಗಳಲ್ಲಿ ಯಾರು – ಈ ಕರ್ನಲ್ ಚಾರಿ ಹೇಳಿದ ನನ್ನ ಹೆಂಡತಿಯೆಂಬ ಯೋಚನೆಯೂ ಮುನ್ನಾಗಿಬಂತು.

ನಾನು ಶಾರ್ವರಿ ಮತ್ತು ಕರ್ನಲ್ ಚಾರಿಯರ 'ಮನೆ'ಗೆಲಸದಲ್ಲಿ ತೊಡಗಿದ್ದು ಇಪ್ಪತ್ತಮೂರು ಇಪ್ಪತ್ತನಾಲ್ಕು ವರ್ಷಗಳ ಹಿಂದೆ. ಆವಾಗಲಷ್ಟೇ ಅವಿಸ್ಮರೆಯೊಂದಿಗೆ ನನ್ನ ಮದುವೆಯಾಗಿತ್ತು. ಇವಳು ಯೂನಿವರ್ಸಿಟಿಯಲ್ಲಿ ನನ್ನ ಜೂನಿಯರಾಗಿದ್ದವಳು. ಇಲ್ಲಸಲ್ಲದ ನೆಪದಲ್ಲಿ ನನ್ನ ಮೇಲೆ ಮುಗಿಬಿದ್ದು ಪ್ರೀತಿ ಸಾಧಿಸಿದ್ದಳು. ಎರಡು ವರ್ಷಗಳ ಕಾಲ ಅತ್ಯುತ್ಕಟವಾದ ಕೋರ್ಟಿಂಗೂ ಜರುಗಿತ್ತು. ಇನ್ನು, ಮದುವೆಯ ವಿಚಾರದಲ್ಲಿ ಇವಳಿಗೂ ಹೆಚ್ಚು ನಾನೇ ಅವಸರಿಸಿದ್ದೆ. ತಾಳಿಬಿಗಿಯದಿದ್ದರೆ ತಪ್ಪಿಹೋದಾಳೆಂದು ಬಗೆದು, ಒತ್ತಾಯಿಸಿ ವರಿಸಿ ಮನೆತುಂಬಿಸಿಕೊಂಡಿದ್ದೇ ಎಡವಟ್ಟಾಗಿತ್ತು. ಆರನೇ ತಿಂಗಳಿಗೆಲ್ಲ ಮನೆಬಿಟ್ಟು ಹೋಗಿ ಲಾಯರ್–ನೋಟಿಸು ಕಳಿಸಿದ್ದಳು. ಇನ್ನು, ಈ ಅವಿಸ್ಮರೆಯೊಡನೆಯ ವಿವಾಹವು ವಿಸರ್ಜಿತವೆಂದು ಡಿಕರಿ ಬರುವುದಕ್ಕೆ ಮುನ್ನವೇ, ಆರ್ಯಾ–ಅನಘಾ ಎಂದಿಬ್ಬರು ಗೆಳತಿಯರೊಡನೆ ಒಟ್ಟೊಟ್ಟಿಗೆ ಡೇಟಿಂಗ್ ನಡೆಸಿ, ಮೂವರ ನಡುವೆ ಬಲುರೋಚಕವಾದ ತ್ರಿಕೋನವುಂಟಾಗಿ, ಕೊನೆಗೆ ಅನಘೆಯೊಂದಿಗೆ ಘನಘೋರವಾಗಿ ಮದುವೆಯಲ್ಲಿ ಊರಿಕೊಂಡಿದ್ದೆ. ಇವಳಾದರೂ ಕರಾರುವಾಕ್ಕಾಗಿ ಹತ್ತೊಂಬತ್ತು ವರ್ಷ ಒಡನಿದ್ದಳು. ಇಬ್ಬರೂ ಹಾಲೊಳಗೆ ಸಿಹಿಯಿಳಿಸಿದಷ್ಟು ಅನ್ಯೋನ್ಯವಾಗಿದ್ದೆವು. ಹಾಗೆ ನೋಡಿದರೆ, ಅವರಿವರಿಗೂ ಹೆಚ್ಚಾಗಿ ಹೆಂಡತಿಯೆಂದು ನಾನು ನಿಜಕ್ಕೂ ನಂಬಿದ್ದು – ಈ ಅನಘೆಯನ್ನೇ. ಆದರೆ ಇಬ್ಬರ ಹಣೆಬರಹವೇ ಇನ್ನೊಂದಾಗಿತ್ತು. ಇದ್ದಕ್ಕಿದ್ದಂತೆ ಮಿಹಿಕಾ ನನ್ನ ಬದುಕಿನಲ್ಲಿ ಅಡಿಯಿಟ್ಟಳು. ಆಫೀಸಿನಲ್ಲಿ ಕೆಲಸಕ್ಕೆಂದು ಬಂದವಳು, ನನಗೇ ಗೊತ್ತಿರದೆ ನನ್ನ ಮನಸ್ಸನ್ನೂ ಆಳಿಬಿಟ್ಟಳು. ಆಳು ಎಂದು ತನ್ನ ತಾನು ಕೊಟ್ಟವಳೆದುರು ನಾನೇ ಆಳಾಗಿಬಿಟ್ಟೆ. ಕಡೆಗೆ ಅನಘೆಯೇ ತಾನೇ ತಾನಾಗಿ ನನ್ನನ್ನು ಇವಳಿಗೆ ಬಿಟ್ಟುಕೊಟ್ಟಳು. ತಾನು ಇಲ್ಲಾ ಅವಳು ಅಂತೆಂಬ ಸಂದಿಗ್ಧದ ಸವಾಲನ್ನೇ ಎತ್ತದೆ, ನೋಯದೆ, ನೋಯಿಸದೆ ಸರಿದುಹೋದಳು. ಸರಿ. ಆರೆಂಟು ತಿಂಗಳು ಕಾಲ ಮಾತ್ರ ಒಡನಿದ್ದ ಮಿಹಿಕಾ, ಈ ಕೊರೊನಾ ಪ್ರಯುಕ್ತದ ಮೊದಲ ವಂತಿಗೆಯ ಲಾಕ್‌ಡೌನಿನ ನಡುವೆ, ಇದ್ದಕ್ಕಿದ್ದಂತೊಮ್ಮೆ ಮನೆಬಿಟ್ಟು ಹೋದವಳು ವಾಪಸಾಗಲೇ ಇಲ್ಲ. ಇನ್ನು, ಹೋಗಿದ್ದೇತಕ್ಕೆನ್ನುವ ಕಾರಣವು ಸಹ ನನಗೆ ಗೊತ್ತಾಗಲಿಲ್ಲ. ಕೋವಿಡ್ಡಿನ ಮೊದಲಲೆಯು ಮುಗಿದು, ಈವಾಗ ಎರಡನೆಯದು ಅನಾಮತ್ತನೆ ಉಂಟಾದ ಈ ಹೊತ್ತಿಗೂ – ಇವಳ ಏನುಯೆತ್ತ ಗೊತ್ತಾಗಿಲ್ಲ.

ಅಯ್ಯೋ... ಅಳಲಿಗೆ ಮುಗಿತಾಯವೇ ಇಲ್ಲವೇ? ಹೌದು. ಈ ದುಗುಡವಾದರೂ ಕಡುದುರುಳ ವೈರಸಿದ್ದ ಹಾಗೆ. ಎಲ್ಲರನ್ನೂ ಇದ್ದೂ ಇರದ ಹಾಗೆ ಮುತ್ತಿರುತ್ತದೆ. ಸುತ್ತಮುತ್ತಲೇ ಇದ್ದು ಇದ್ದು ಹೊಂಚುತ್ತದೆ. ಸಂಚುಮಾಡುತ್ತದೆ. ಅವಕಾಶ ಸಿಕ್ಕರೆ ಸಾಕು, ಒಳಹೊಕ್ಕು ಎದೆಯಲ್ಲಿ ಊರುತ್ತದೆ. ಒಳಗೇ ಉಮ್ಮಳವುಳಿಸಿ ಕೆಮ್ಮು ದಮ್ಮು ತರಿಸಿ ಕಾರುತ್ತದೆ. ಏನು ತೀರಿದರೂ ತಾನು ತೀರದೆ ಇದ್ದೇ ಇರುತ್ತದೆ. ಛೇ...

ಇನ್ನು, ಲೌಂಜಿನಲ್ಲಿದ್ದ ಯಾರೊಬ್ಬರೂ ನನ್ನನ್ನು ಗಮನಿಸುತ್ತಿರುವಂತೆ ಅನ್ನಿಸಲಿಲ್ಲ. ಕರ್ನಲ್ ಚಾರಿಯು ಹೇಳಿದ್ದು ನಿಜವಾಗಿದ್ದ ಪಕ್ಷಕ್ಕೆ – ಒಬ್ಬರಾದರೂ ನನ್ನತ್ತ ನೋಡಬೇಕಲ್ಲವೇ? ಸುಮ್ಮಸುಮ್ಮನೆ ಏನನ್ನೋ ಹೇಳಿ ಹುಳಬಿಟ್ಟು ಹೊರಟುಬಿಟ್ಟನಲ್ಲ... ಛೇ... ಹೋಗಲಿ, ಅವನಿಗೆ ನನ್ನ ಹೆಂಡತಿ ಯಾರೆನ್ನುವುದಾದರೂ ಗೊತ್ತೇ? ನಾನೇ ಅವನನ್ನು ಸರಿಯಾಗಿ ನೋಡಿ ಕಂಡಿಲ್ಲವೆಂದ ಮೇಲೆ, ಅವನು ನನ್ನ ಹೆಂಡತಿಯನ್ನು ನಿಜಕ್ಕೂ ನೋಡಿರುವುದುಂಟೇ? ಅಥವಾ, ಸುಮ್ಮನೆ ಕನ್‌ಫ್ಯೂಸು